# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬಿ.ಟಿ.ಎಂ ಲೇಔಟ್ ಉಪ-ವಿಭಾಗದ ವಾರ್ಡ್ ಸಂಖ್ಯೆ-152 ಎಸ್.ಜಿ.ಪಾಳ್ಯ ಕಛೇರಿಯಲ್ಲಿ ದಿನಾಂಕ: 18.06.2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು

* * * * * *

ದಿನಾಂಕ-18-06-2022 ರಂದು ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಹೊಸದಾಗಿ ನಿಯೋಜನೆಗೊಂಡಿರುವ ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲ್ಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಮೊದಲಿಗೆ ಸಭೆಗೆ ಹಾಜರಿದ್ದ ಎಲ್ಲಾ ಇಲಾಖೆಯ ಅಧಿಕಾರಿಗಳು/ಸಿಬ್ಬಂದಿವರ್ಗ ಮತ್ತು ವಾರ್ಡ್ ಸದಸ್ಯರನ್ನು ಪರಿಚಯ ಮಾಡುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

ಸಭೆಗೆ ಹಾಜರಿದ್ದ ಅಧಿಕಾರಿ ವರ್ಗ/ ಸದಸ್ಯರು

| ಕ್ರಮ .ಸಂ | ಹೆಸರು | ಮೊಬೈಲ್ ಸಂಖ್ಯೆ |
|---|---|---|
| ೦೧ | ಶ್ರೀ.ಅಶೋಕ್.ಎಸ್.ಬಿರಾದಾರ ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಟಿ.ಎಂ ಲೇಔಟ್ ಉಪವಿಭಾಗ | 9008658224 |
| ೦೨ | ಶ್ರೀ.ಸತೀಶ್.ಡಿ ಸಹಾಯಕ ಅಭಿಯಂತರರು ವಾರ್ಡ್152 ಎಸ್.ಜಿ.ಪಾಳ್ಯ | 9480688152 |
| ೦೩ | ಶ್ರೀ.ಅಜಯ್‌ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು | 9632222304 |
| ೦೪ | ಶ್ರೀ. ಮಲ್ಲಿಕಾರ್ಜುನ್ ಬಿರಾದರ ಹಿರಿಯ ಆರೋಗ್ಯ ಪರಿವೀಕ್ಷಕರು | 9945042307 |
| ೦೫ | ಶ್ರೀ.ಸುರೇಶ್ ಎ.ಎಸ್.ಐ ಎಸ್.ಜಿ.ಪೋಲಿಸ್ ಠಾಣೆ | 8123010522 |
| ೦೬ | ಶ್ರೀ.ಹೋಲಿಯಪ್ಪ ಮಾರ್ಷ್‌ಲ್ | 8904349926 |
| ೦೭ | ಶ್ರೀ.ಡಾ॥ ಗೌತಮ್ ಪ್ರಕಾಶ್ ಹೆಚ್ ಮೆಡಿಕಲ್ ಆಫಿಸರ್ | 9986000094 |
| ೦೮ | ಶ್ರೀ.ಮುನಿಂದ್ರ ಮೇಲ್ವಿಚಾರಕರು ಫ.ತ್ಯಾನಿ | 9901002067 |
| ೦೯ | ಶ್ರೀ ರಮೇಶ್ ಸದಸ್ಯರು | 9731108622 |
| ೧೦ | ಶ್ರೀ.ಗಂಗಾದ್ರೀ ಮೇಲ್ವಿಚಾರಕರು ಫ.ತ್ಯಾನಿ | 9980225272 |
| ೧೧ | ಶ್ರೀ.ಎನ್.ಲೋಕೇಶ್ ಸದಸ್ಯರು | 9448579144 |
| ೧೨ | ಶ್ರೀಮತಿ.ಭೂದೇವಿ ಕೆಲಸ ಪರಿವೀಕ್ಷರು ತೋಟಗಾರಿಕೆ ಇಲಾಖೆ | 9740903427 |
| ೧೩ | ಶ್ರೀ.ದೇವರಾಜು ಮಡಿವಾಳ ಪೊಲೀಸ್ ಠಾಣೆ | 9972106146 |
| ೧೪ | ಶ್ರೀಮತಿ.ಕವಿತ ಆರ್. | 9620394514 |

1) ಶ್ರೀ.ಲೋಕೆಶ್.ಎನ್ ರವರು ಮಾತನಾಡಿ, ವೆಂಕಟೇಶ್ವರ ಕಾಲೇಜು ರಸ್ತೆಯಲ್ಲಿ ಮ್ಯಾನ್‌ಹೋಲ್‌ಗಳು ರಸ್ತೆಮಟ್ಟದಿಂದ ಕೆಳಹಂತದಲ್ಲಿದ್ದು, ರಸ್ತೆ ಸವಾರರಿಗೆ ಸುಗಮ ಸಂಚಾರಕ್ಕೆ ತೊಂದರೆಯಾಗುತ್ತಿರುತ್ತದೆ ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ಮಾನ್ಯ ಅಧ್ಯಕ್ಷರು ಸಭೆಗೆ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು.

2) ಶ್ರೀ.ಲೋಕೇಶ್ ರವರು ಮಾತನಾಡಿ, ಚಿಕ್ಕಾಡುಗೋಡಿ 2ನೇ ಮುಖ್ಯರಸ್ತೆ, ಕೆ.ಇ.ಬಿ ರಸ್ತೆಯಲ್ಲಿ ರಸ್ತೆಗುಂಡಿ ಬಿದ್ದಿರುತ್ತದೆ ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ಸಭೆಯಲ್ಲಿ ಹಜರಿದ್ದ ವಾರ್ಡ್ ಅಭಿಯಂತರರು ಗುಂಡಿಯನ್ನು ಕೂಡಲೇ ಮುಚ್ಚುವ ಕ್ರಮಕೈಗೊಳ್ಳಲು ಮಾನ್ಯ ಅಧ್ಯಕ್ಷರು ತಿಳಿಸಿದರು.

3) ಸಭೆಯಲ್ಲಿ ಹಾಜರಿದ್ದ ವಾರ್ಡ್ ಅಭಿಯಂತರರು ಮಾತನಾಡಿ, ಗುಡ್‌ಅರ್ಥ್ ಸ್ಕೂಲ್ ರಸ್ತೆಯಲ್ಲಿ ಒಳಚರಂಡಿ ಸಂಪರ್ಕದ ಕಾಮಗಾರಿಗಾಗಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯಿಂದ ರಸ್ತೆಯನ್ನು ಅಗೆದು, ಹಾಗೆಯೇ ಬಿಟ್ಟಿರುವುದು ಕಂಡುಬಂದಿರುತ್ತದೆ ಎಂದು ಸಭೆಗೆ ತಿಳಿಸಿದರು. ಈ ಸಂಬಂಧ ಮಾನ್ಯ ಅಧ್ಯಕ್ಷರು ಮಾತನಾಡಿ, ಸಭೆಗೆ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಅಭಿಯಂತರರಾದ ಹರೀಶ್‌ರವರಿಗೆ ಕೂಡಲೇ ಪ್ರಸ್ತಾಪಿತ ರಸ್ತೆಯನ್ನು ಯಥಾಸ್ಥಿತಿಗೆ ತರಲು ಕ್ರಮಕೈಗೊಳ್ಳಲು ಸೂಚಿಸಿದರು.

4) ಮಾನ್ಯ ಅಧ್ಯಕ್ಷರು ಮಾತನಾಡಿ, ಪಾಲಿಕೆವತಿಯಿಂದ ಹೊಸದಾಗಿ ನಿರ್ಮಾಣಗೊಂಡಿರುವ ಪೊಲೀಸ್‌ಠಾಣೆಯ ಕಟ್ಟಡವನ್ನು ಪೊಲೀಸ್ ಇಲಾಖೆಗೆ ಹಸ್ತಾಂತರಿಸಲು ಮಾನ್ಯ ಆಯುಕ್ತರಿಂದ ಅನುಮೋದನೆಗೊಂಡಿದ್ದು, ಕೂಡಲೇ ಸಕ್ಷಮ ಇಲಾಖೆಯಿಂದ ಒಡಂಬಡಿಕೆ ಪತ್ರವನ್ನು ತಯಾರಿಸಿ ಬಾಡಿಗೆ ಆಧಾರದ ಮೇಲೆ ವಶಕ್ಕೆ ಪಡೆಯಲು ಸಭೆಗೆ ಹಾಜರಿದ್ದ ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.